7

# ನಾವು ಯೇಸುವನ್ನು ಹೇಗೆ ದೃಷ್ಟಿಸಬೇಕು?

ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಬಹಳ ಸಲ ಸಂಶೋಧನೆ ಮಾಡಲು ಒಪ್ಪಿಸಲ್ಪಡುವುದು. ಸಂಶೋಧನೆ ಮಾಡುವದರಲ್ಲಿ ಅವರು ಯಾವಾಗಲೂ ಸಂತೋಷ ಪಡುವದಿಲ್ಲ. ಸಂಶೋಧನೆಯ ಕಡೆಗೆ ಅವರ ಮನೋಭಾವನೆಗೆ ಎರಡು ಕಾರಣಗಳಿವೆ. ಮೊದಲನೆಯದು, ಸಂಶೋಧನೆಯು ಕಠಿಣವಾದ ಕೆಲಸ, "ನಾನು ಓದುವದರಲ್ಲಿ ಸಂತೋಷ ಪಡುವದಿಲ್ಲ. ಆದರೆ ಓದಿದ್ದಕ್ಕಾಗಿ ಸಂತೋಷ ಪಡುತ್ತೇನೆ" ಎಂದು ಒಬ್ಬನು ಹೇಳಿದನು. ಅನೇಕ ವಿದ್ಯಾರ್ಥಿಗಳು ಸಂಶೋಧನೆ ಮಾಡುವದರಲ್ಲಿ ಸಂತೋಷಪಡುವದಿಲ್ಲ, ಆದರೆ ಸಂಶೋಧನೆ ಮಾಡಿದ ಮೇಲೆ ಸಂತೋಷ ಪಡುತ್ತಾರೆ. ಎರಡನೆಯದು, ಬಹಳ ವಾದ ಸಂಶೋಧನೆಯು ತೆರೆದ - ಅಂತ್ಯವುಳ್ಳದ್ದು. ನಾವು ತಿಳಿದುಕೊಂಡದ್ದನ್ನು, ನಾವು ತಿಳಿಯದೇ ಇರುವಂಥದ್ದನ್ನು ಸಂಶೋಧನೆಯು ವಿಂಗಡಿಸುತ್ತದೆ. ಹಾಗೂ ಕೆಲವು ಸಲ ನಾವು ತಿಳಿದಿರುವಂಥದ್ದಕ್ಕಿಂತಲೂ ತಿಳಿಯದೇ ಇರುವಂಥದ್ದು ಹೆಚ್ಚು ಸ್ಪಷ್ಟವಾಗಿರುತ್ತದೆ. "ನಾನು ಈ ಸಂಶೋಧನೆಯ ಯೋಜನೆಯನ್ನು ಪ್ರಾರಂಭಿಸುವ ಮೊದಲು ಈ ವಿಷಯದ ಬಗ್ಗೆ ನಾನು ಏನನ್ನೂ ತಿಳಿದುಕೊಂಡಿರಲಿಲ್ಲ. ಈಗ ನಾನು ಈ ಯೋಜನೆಯನ್ನು ಪೂರ್ತಿಗೊಳಿಸಿದ್ದೇನೆ. ಈ ವಿಷಯದ ಬಗ್ಗೆ ಯಾರೂ ಏನನ್ನಾದರೂ ತಿಳಿದುಕೊಂಡಿಲ್ಲವೆಂದು ನಾನು ಬಲ್ಲೆನೆ" ಎಂದು ಒಬ್ಬ ವಿದ್ಯಾರ್ಥಿಯು ಹೇಳುವದರಿಂದ ತನ್ನ ಯೋಜನೆಯನ್ನು ಮುಕ್ತಾಯ ಗೊಳಿಸಬಹುದು. ಇಂಥ ಮುಕ್ತಾಯವು ಬಹಳ ನಿರಾಶಾದಾಯಕವಾದದ್ದಾಗಿರುವುದು.

ಕೆಲವು ಪ್ರಮುಖ ವಿಷಯಗಳ ಬಗ್ಗೆ ಸತ್ಯವನ್ನು ತಿಳಿಯುವದಕ್ಕೆ ನಾವೆಲ್ಲರೂ ಬಯಸುವೆವು. ತೆರೆದ - ಅಂತ್ಯಗಳೊಂದಿಗೆ ಇರುವಂಥದದ್ದರಿಂದ, ಅದರ ಬಗೆಗಿನ ಪೂರ್ತಿಗೊಳ್ಳದ ಚರ್ಚೆಯಿಂದ ನಮಗೆ ತೃಪ್ತಿಯಾಗುವದಿಲ್ಲ. ಇದು ವಿಶೇಷವಾಗಿ ಯೇಸು ಕ್ರಿಸ್ತನ ವಿಷಯದ ಬಗ್ಗೆ ಸತ್ಯವಾಗಿರುವುದು. ಆತನ ಬಗ್ಗೆ ಯಾರೋ ಒಬ್ಬನ ಅಭಿಪ್ರಾಯವನ್ನು ಅಥವಾ ಆತನ ಬಗೆಗಿರುವ ಅಸ್ಪಷ್ಟವಾದ ತತ್ವಗಳ ಚರ್ಚೆಯ ಬಗ್ಗೆ ನಾವು ಕೇಳಲು ಬಯಸುವದಿಲ್ಲ; ಅದರ ಬಗ್ಗೆ ನಮ್ಮ ಆಳವಾದ ಪ್ರಶ್ನೆಗಳು

ಸ್ಪಷ್ಟವಾದವುಗಳೂ ನಿರ್ದಿಷ್ಟವಾದವುಗಳೂ ಆಗಿವೆ: ಯೇಸುವು ಯಾರು? ಆತನು ನಿಜವಾಗಿಯೂ ದೇವರ ಕುಮಾರನೋ? ಜೀವ ಮತ್ತು ರಕ್ಷಣೆಯ ಬಗ್ಗೆ ಆತನು ಏನು ಹೇಳುವನು?

ಈ ಜಗತ್ತಿನಲ್ಲಿ ಬೈಬಲು ಮಾತ್ರವೇ ನಿಜವಾದ, ಖಚಿತವಾದ ಪುಸ್ತಕವಾಗಿದೆ. ಆತನ ಬೋಧನೆಯ ಬಗ್ಗೆ ನಾವು ನಿಶ್ಚಿತತೆ ಯುಳ್ಳವರಾಗಿರುವಂತೆ ದೇವರು ಅದನ್ನು ನಮಗೆ ಕೊಟ್ಟನು (2 ಪೇತ್ರ 1:3). ಯೇಸುವಿನ ಅನಿಶ್ಚಿತತೆಯೊಂದಿಗೆ ನಮ್ಮ ಜೀವನವು ಹೋಗಬೇಕೆಂದು ದೇವರು ಬಯಸುವದಿಲ್ಲ. ಯೇಸುವು ಯಾರಾಗಿರುವನು ಮತ್ತು ಆತನು ಏನು ಮಾಡಲು ಬಂದನು ಎಂಬುದನ್ನು ನಾವು ತಿಳಿಯಬೇಕೆಂದು ಆತನು ಬಯಸುತ್ತಾನೆ. ಆ ಸತ್ಯದ ಮೇಲೆ ವಿಶ್ವಾಸದ ಮತ್ತು ಭರವಸೆಯ ಜೀವಿತವನ್ನು ನಾವು ಕಟ್ಟಲಿಕ್ಕಾಗುವಂತೆ ತನ್ನ ಬಗ್ಗೆ ಸಂಪೂರ್ಣ ಸತ್ಯವಿರಬೇಕೆಂದು ಆತನು ಬಯಸುತ್ತಾನೆ.

ನಮಗಿರುವ ಯೇಸುವಿನ ಕೇವಲ ಅಧಿಕೃತವಾಗಿರುವ ಚಿತ್ರವನ್ನು ಬೈಬಲು ನಮಗೆ ಕೊಡುತ್ತದೆ. ಆತನು ಯಾರಾಗಿರುವನೆಂಬುದನ್ನು ಎರಡು ವಿಧ ಗಳಲ್ಲಿ ಅದು ನಮಗೆ ಹೇಳುತ್ತದೆ: ಮೊದಲನೆಯದು, ಪರಿಶುದ್ಧ ಬರಹಗಳಲ್ಲಿ ಆತನು ಏನೆಂದು "ಕರೆಯಲ್ಪಟ್ಟಿದ್ದಾನೆ" ಎಂಬುದನ್ನು ಗಮನಿಸುವದರಿಂದ ಆತನು ಯಾರಾಗಿರುವನೆಂಬುದನ್ನು ನೋಡುತ್ತೇವೆ. ಎರಡನೆಯದು, ಆತನಿಗೆ ಹೊರಿಸಿದ "ಗುಣಲಕ್ಷಣಗಳನ್ನು" ಗಮನಿಸುವದರಿಂದ ಆತನು ಯಾರಾಗಿರುವನೆಂಬುದನ್ನು ನೋಡುತ್ತೇವೆ.

ಬೈಬಲಿನಲ್ಲಿ ಆತನು ಏನೆಂದು ಕರೆಯಲ್ಪಟ್ಟಿದ್ದಾನೆಂಬುದನ್ನು ಜಾಗರೂಕತೆಯಿಂದ ಗಮನಿಸೋಣ. ನಾವು ನಂಬುವವನಿಂದ ಒಬ್ಬ ಮನುಷ್ಯನು ಒಬ್ಬ ಪ್ರಸಂಗಿಯಂತೆ ಮತ್ತು ಬೋಧಕನಂತೆ ನಮಗೆ ಪರಿಚಯ ಮಾಡಿಕೊಡಲ್ಪಟ್ಟರೆ, ಆ ಮನುಷ್ಯನು ಯಾರೆಂದು ಹಾಗೂ ಎಂಥ ಮನುಷ್ಯನಾಗಿರುವನೆಂದು ಅವನ ಮೂಲಕವಾಗಿ ನಾವು ತಿಳಿದುಕೊಳ್ಳುವೆವು. "ಪ್ರಸಂಗಿ" ಮತ್ತು "ಬೋಧಕ" ಎಂಬ ಪದಗಳು ಅವನ ಸ್ಪಷ್ಟ ಚಿತ್ರವನ್ನು ನಮಗೆ ಕೊಡುತ್ತವೆ.

ಯೇಸುವಿನ ಗುರುತಿನ ಬಗ್ಗೆ ಪರಿಶುದ್ಧ ಬರಹಗಳು ನಮ್ಮಲ್ಲಿ ಸಂಶಯವನ್ನು ಬಿಡುವದಿಲ್ಲ. ನಾವು ತಪ್ಪಾಗಿ ಅರ್ಥಮಾಡಿಕೊಳ್ಳದ ಮಾತುಗಳಲ್ಲಿ ಆತನು ಸ್ಪಷ್ಟವಾಗಿ ವಿವರಿಸಲ್ಪಟ್ಟಿದ್ದಾನೆ. ಪರಿಶುದ್ಧ ಬರಹಗಳಲ್ಲಿ ಯೇಸುವು ಏನೆಂದು ಕರೆಯಲ್ಪಟ್ಟಿದ್ದಾನೆ ಎಂಬುದನ್ನು ಜಾಗರೂಕತೆಯಿಂದ ಅಧ್ಯಯನ ಮಾಡಿದರೆ, ಆತನು ಯಾರಾಗಿರುವನೆಂದು ತಿಳಿದುಕೊಳ್ಳುವೆವು.

## ಆತನು ನಮ್ಮ ರಕ್ಷಕನು

ಮೊದಲನೆಯದು, ಪರಿಶುದ್ಧ ಬರಹಗಳು ಯೇಸುವನ್ನು "ರಕ್ಷಕ" ಎಂದು ಕರೆಯುತ್ತವೆ. "ರಕ್ಷಕ" ಎಂಬ ಪದವು ಅತೀಯಾದ ಗಂಡಾಂತರದಿಂದ ಇತರರನ್ನು ಉಳಿಸುವದಕ್ಕೆ ಸಂಬಂಧಿಸಿದೆ.

ಮತ್ತಾಯದಲ್ಲಿ ಜನನದ ವಿಷಯ ದಾಖಲೆಯಾಗಿದ್ದುದರಲ್ಲಿ ಯೇಸುವಿಗೆ ಭೂಲೋಕದ ತಂದೆಯಾಗಿದ್ದ ಯೋಸೇಫನಿಗೆ ಕನಸಿನಲ್ಲಿ ಕಾಣಿಸಿಕೊಂಡದ್ದು ಹೇಳಲ್ಪಟ್ಟಿದೆ. ದೇವದೂತನು ಹೀಗೆ ಹೇಳಿದನು,

> ... ಯೋಸೇಫನೇ, ದಾವೀದನ ವಂಶದವನೇ, ನಿನ್ನ ಹೆಂಡತಿಯಾದ ಮರಿಯಳನ್ನು ಸೇರಿಸಿಕೊಳ್ಳುವದಕ್ಕೆ ಅಂಜಬೇಡ. ಆಕೆಯ ಗರ್ಭವು ಪರಿಶುದ್ಧಾತ್ಮನಿಂದಲೇ ಆದದ್ದು. ಆಕೆಯು ಒಬ್ಬ ಮಗನನ್ನು ಹಡೆಯುವಳು; ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು; ಯಾಕಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿಕಾಯುವನು (ಮತ್ತಾಯ 1:20, 21).

ನೀವೇ ನೋಡುವಂತೆ, ಯೇಸುವು ಕೇವಲ ಯಾವುದೋ ರೀತಿಯ ರಕ್ಷಕನಾಗಿರಲಿಲ್ಲ; ಆತನು ಅದ್ವಿತೀಯ ರಕ್ಷಕನಾಗಿದ್ದನು. ಉರಿಯುತ್ತಿರುವ ಒಂದು ಕಟ್ಟಡದಿಂದ ಒಬ್ಬನು ಒಂದು ಮಗುವನ್ನು ರಕ್ಷಿಸಿದರೆ, ಅವನನ್ನು ನಾವು ರಕ್ಷಕನು ಎಂದು ಕರೆಯುತ್ತೇವೆ. ಹಸಿವೆಯಿಂದ ಬಳಲುತ್ತಿರುವ ಜನರಿಗೆ ಒಬ್ಬನು ಆಹಾರ ವಿತರಣೆ ಮಾಡಿದರೆ, ಜನರ ರಕ್ಷಕನೆಂದು ಅವನು ಕರೆಯಲ್ಪಡುತ್ತಾನೆ. ಪರಿಶುದ್ಧ ಬರಹಗಳ ಪ್ರಕಾರವಾಗಿ ಯೇಸುವು ನಮ್ಮನ್ನು ನಮ್ಮ ಪಾಪಗಳಿಂದ ರಕ್ಷಿಸುವನು. ಆತನು ನಮ್ಮ ಆತ್ಮಿಕ ರಕ್ಷಕನಾಗಿರುವನು.

ಪ್ರತಿಯೊಬ್ಬ ಜವಾಬ್ದಾರಿಯುಳ್ಳ ವ್ಯಕ್ತಿಯು ಪಾಪದ ಅಪರಾಧವನ್ನು ಮೊದಲನೆಯ ತೊಂದರೆಯನ್ನಾಗಿ ಎದುರಿಸತಕ್ಕದ್ದು. ನಮ್ಮ ಕುತ್ತಿಗೆಯ ಸುತ್ತ ಟೇಪ ರೆಕಾರ್ಡರುಗಳನ್ನು ಕಟ್ಟಿಕೊಂಡು ನಲ್ವತ್ತೆಂಟು ತಾಸುಗಳಲ್ಲಿ ನಮ್ಮ ಬಾಯಿಂದ ಬರುವ ಪ್ರತಿಯೊಂದು ಮಾತನ್ನು ರೆಕಾರ್ಡ ಮಾಡಿದರೆ, ನಾವು ಪಾಪಿಗಳಾ ಗಿರುವೆವೆಂದು ಸುಲಭವಾಗಿ ಕಂಡುಕೊಳ್ಳುವೆವು ಎಂದು ಒಬ್ಬನು ಹೇಳಿದ್ದಾನೆ. ನಾವು ಕುಳಿತು ಕೊಂಡು ಪ್ರತಿಯೊಂದು ಪದವನ್ನು ಕೇಳಿ, ಪ್ರತಿಯೊಂದು ಹೇಳಿ ಕೆಯ ಹಿಂದಿರುವ ಪದವನ್ನು ಆಲಿಸಿದರೆ ಮತ್ತು ನಾವು ಮಾತಾಡಿದ ಸ್ವರದ ಮೇಲೆ ಯೋಚಿಸಿದರೆ ನಾವು ಹೇಳ ಬೇಕಾದದ್ದನ್ನು ಯಾವಾಗಲೂ ಹೇಳುವದಿಲ್ಲವೆಂಬ ನಿರ್ಧಾರಕ್ಕೆ ನಿಶ್ಚಯವಾಗಿ ಬರುವೆವು. ಹಾಗೆಯೇ ನಮ್ಮ ಜೀವನದ ನಲ್ವತ್ತೆಂಟು ತಾಸುಗಳ ಫಿಲ್ಮನ್ನು ವೀಡಿಯೋ ಕ್ಯಾಮರಾವನ್ನು ಉಪಯೋಗಿಸಿ ತೆಗೆಯಬಹುದು.

ನಮ್ಮ ಪ್ರತಿಯೊಂದು ಕೃತಿಯನ್ನು, ಕಾರ್ಯವನ್ನು ಪುನರಾವಲೋಕನ ಮಾಡುವಾಗ ನಾವು ಪಾಪಿಗಳಾಗಿದ್ದೇವೆಂದು ಸುಲಭವಾಗಿ ನೋಡುವೆವು. ನಾವು ಮಾಡ ಬೇಕಾದದ್ದನ್ನು ಮಾಡದೆ ಹಾಗೂ ಮಾಡಬಾರದ್ದನ್ನು ಮಾಡುವಂಥ ಸತ್ಯವನ್ನು ಎದುರಿಸುವೆವು. ನಾವು ಪಾಪಿಗಳಾಗಿರುವೆವೆಂಬುದನ್ನು ಹೇಳಲು ನಮಗೆ ಸತ್ಯವೇದದ ಅವಶ್ಯಕತೆಯೂ ಇರುವದಿಲ್ಲ. ನಮ್ಮ ಮಾತುಗಳ ಮತ್ತು ಕಾರ್ಯಗಳ ಕಡೆಗೆ ಸಮೀಪದಿಂದ ನೋಡುವಾಗ ನಾವು ಪಾಪಿಗಳಾಗಿದ್ದೇವೆಂಬುದನ್ನು ತಿಳಿದು ಕೊಳ್ಳುವೆವು. ಹೀಗಿದ್ದರೂ ಬೈಬಲು ಸ್ಪಷ್ಟವಾದ ಭಾಷೆಯಲ್ಲಿ ನಮ್ಮ ಬಗ್ಗೆ ಸತ್ಯವನ್ನು ಘೋಷಿಸುತ್ತದೆ, "... 'ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ' " (ರೋಮಾಪುರ 3:10) ಎಂದು ಪೌಲನು ಕ್ರೈಸ್ತರಿಗೆ ಜ್ಞಾಪಿಸಿದ್ದಾನೆ.

ನಮ್ಮ ಪಾಪದ ಬಗ್ಗೆ ಏನು ಮಾಡಲ್ಪಡಬೇಕು? ನಮ್ಮನ್ನು ನಾವೇ ಕ್ಷಮಿಸಿಕೊಳ್ಳಲಾರೆವು. ನಮ್ಮ ಪಾಪವು ಇತರರ ವಿರುದ್ಧವಾಗಿ ಮಾತ್ರವೇ ಅಲ್ಲ, ಆದರೆ ಇದು ದೇವರಿಗೆ ವಿರುದ್ಧವಾಗಿಯೂ ಸಹ ಇರುವುದು. ನಮ್ಮ ಅತೀ ಅವಸರದ ನಮ್ಮ ಅಗತ್ಯತೆಯೊಂದಿಗೆ ನಮಗೆ ಯಾರು ಸಹಾಯ ಮಾಡುವರು? ಮನೋ ವಿಜ್ಞಾನವು ನಮ್ಮನ್ನು ಕ್ಷಮಿಸಲಾರದು. ಸಕಾರಾತ್ಮಕ ಯೋಜನೆಯು ಸಹಾಯ ಮಾಡಲಾರದು. ನಾವು ಪಾಪಿಗಳು ಎಂದು ನಟಿಸುವುದೂ ನಮ್ಮನ್ನು ರಕ್ಷಿಸಲಾರದು. ಏನು ಮಾಡಲ್ಪಡಬೇಕು? ನಮ್ಮ ನಿರಾಶಾದಾಯಕ ಪರಿಸ್ಥಿತಿಗೆ ಯೇಸುವು ನಮ್ಮ ಉತ್ತರವಾಗಿದ್ದಾನೆ. ಯೇಸುವಿನ ಹೆಸರು ಪರಲೋಕದಲ್ಲಿ ತೀರ್ಮಾನಿಸಲ್ಪಟ್ಟಿದೆ ಎಂದು ಯೋಸೇಫನಿಗೆ ಹೇಳಲ್ಪಟ್ಟಿತು, ಯಾಕಂದರೆ ಆತನು ಭೂಲೋಕದಲ್ಲಿ ಪೂರೈಸಬೇಕಾದ ಕಾರ್ಯಕ್ಕಾಗಿ. ಆತನು ಜನಿಸಿದಾಗ, ಪಲೆಸ್ತೀನದಲ್ಲಿಯ ಒಂದು ಗುಡ್ಡದ ಮೇಲೆ ದೇವದೂತರು ಕುರುಬರಿಗೆ ಹೀಗೆ ಹೇಳಿದರು, "ಈ ಹೊತ್ತು ನಿಮಗೋಸ್ಕರ ದಾವೀದನೂರಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ, ಆತನು ಕರ್ತನಾಗಿರುವ ಕ್ರಿಸ್ತನೇ" (ಲೂಕ 2:11). ಯೇಸುವು ಈ ಭೂಲೋಕಕ್ಕೆ ಬಂದ ಪ್ರಮುಖ ಉದ್ದೇಶವು ನಮ್ಮನ್ನು ನಮ್ಮ ಪಾಪಗಳಿಂದ ರಕ್ಷಿಸುವುದಾಗಿತ್ತು (1 ಕೊರಿಂಥ 15:3).

ನೆಪೋಲಿಯನ್ನನ ಸೈನ್ಯದಲ್ಲಿ ಒಬ್ಬ ಸೈನಿಕನ ಬಗ್ಗೆ ಮನಮುಟ್ಟುವ ಕಥೆಯೊಂದು ಹೇಳಲ್ಪಡುತ್ತದೆ. ಅವನು ಒಬ್ಬ ಶೂರ, ನಂಬಿಗಸ್ತ ಸೈನಿಕನಾಗಿದ್ದನು. ಯುದ್ಧಗಳ ಮಧ್ಯದಲ್ಲಿ, ಅವನು ತನ್ನ ಡೇರೆಯಲ್ಲಿ ಇದ್ದುಕೊಂಡು ತನ್ನ ಕರ್ತವ್ಯಗಳ ಹಾಗೂ ಕುಟುಂಬದ ಜವಾಬ್ದಾರಿಕೆಗಳ ಬಗ್ಗೆ ಪುನರಾವಲೋಕನೆ ಮಾಡುತ್ತಿದ್ದನು. ತನಗಿದ್ದ ಸಾಲದ ಬಗ್ಗೆ ಒಂದು ಕಾಗದದ ಮೇಲೆ ಪಟ್ಟಿ ಮಾಡಿದನು. ತನ್ನ ಕುಟುಂಬದ ಜೋಪಾಸನೆಗಾಗಿ ಎಷ್ಟು ಹಣದ ಅವಶ್ಯಕತೆಯಿದೆಯೆಂದು ಬರೆದಿದ್ದನು. ತನ್ನ ಸಾಲ ತೀರಿಸಲಿಕ್ಕೆ ಮತ್ತು ತನ್ನ ಕುಟುಂಬದ ಖರ್ಚಿಗಾಗಿ ಅಗತ್ಯವಿರುವ ಹಣವು ತನ್ನಲ್ಲಿ ಇರುವದಿಲ್ಲವೆಂದು ತಿಳಿದುಕೊಂಡಾಗ ಅವನಲ್ಲಿ

ನಿರಾಶೆಯ ಗಾಳಿಬೀಸಿತು. ಆಳವಾದ ನಿರಾಶೆಯಿಂದ ತುಂಬಿದವನಾಗಿ ತಾನು ಕೊಡಬೇಕಾಗಿದ್ದ ಸಾಲದ ಪಟ್ಟಿಯ ಕೆಳಗೆ "ಈ ಎಲ್ಲಾ ಸಾಲಗಳನ್ನು ತೀರಿಸುವವರು ಯಾರಿದ್ದಾರೆ?" ಎಂದು ಬರೆದನು, ಸೋತು ಹೋದ ಭಾವನೆಯೊಂದಿಗೆ ತನ್ನ ತೋಳಿನ ಮೇಲೆ ತನ್ನ ತಲೆಯನಿಟ್ಟು ನಿದ್ರೆ ಹೋದನು. ಸೈನಿಕನಿಗೆ ತಿಳಿಯದಂತೆ, ನೆಪೋಲಿಯನ್ ತನ್ನ ಸೈನಿಕರ ಕ್ಯಾಂಪಿನಲ್ಲಿ ಅಲೆದಾಡಿ ಅವರ ಪರಿಸ್ಥಿತಿಯನ್ನು ಪರೀಕ್ಷಿಸಿ ಅವರ ಬಲವನ್ನು ಲೆಕ್ಕ ಹಾಕಲು ಪ್ರಯತ್ನಿಸುತ್ತಿದ್ದನು. ಈ ಯುವ ಸೈನಿಕನ ಡೇರೆಯನ್ನು ದಾಟಿಹೋಗುವಾಗ, ಪರೀಕ್ಷಿಸುವದಕ್ಕಾಗಿ ಕರೆದನು. ಆದರೆ ಡೇರೆಯೊಳಗಿಂದ ಯಾವ ಉತ್ತರ ಬರಲಿಲ್ಲ. ಅವನು ಒಳಗೆ ಹೋಗಿ ನೋಡಿದನು. ನಿದ್ರಿಸುತ್ತಿದ್ದ ಸೈನಿಕನನ್ನು, ಕಾಗದ ಅಡಿಯಲ್ಲಿ ಬರೆದ ಕರುಣಾ ಜನಕ ಪ್ರಶ್ನೆಯನ್ನು ನೋಡಿದನು. ನೆಪೋಲಿಯನ್ ಕೆಳಕ್ಕೆ ಬಾಗಿ. ತನ್ನ ಪೆನ್ನನ್ನು ತೆಗೆದು ಕೊಂಡು ಪ್ರಶ್ನೆಯ ಕೆಳಗೆ "ನಾನು ಇದ್ದೇನೆ" ಎಂದು ಬರೆದು "ನೆಪೋಲಿ ಯನ್" ಎಂದು ಸಹಿ ಹಾಕಿದನು.

ನಮ್ಮ ಪಾಪದ ಸಾಲದ ಕಡೆಗೆ ಹಾಗೂ ರಕ್ಷಣೆಗಾಗಿ ನಮ್ಮ ಅಗತ್ಯತೆಯ ಕಡೆಗೆ ನೋಡುವಾಗ, "ಈ ಎಲ್ಲಾ ಸಾಲಗಳನ್ನು ತೀರಿಸುವವರು ಯಾರು ಇದ್ದಾರೆ?" ಎಂದು ನಾವೂ ಸಹ ಕೂಗುವೆವು. ನೆಪೋಲಿಯನ್ನನಿಗಿಂತಲೂ ಎಷ್ಟೋ ಹೆಚ್ಚು ದೊಡ್ಡವನಾದಾತನು "ನಾನಿದ್ದೇನೆ" ಎಂದು ಉತ್ತರ ಕೊಟ್ಟಿದ್ದಾನೆ. ಯೇಸುವು ಇಡೀ ಲೋಕದ ರಕ್ಷಕನು, ಶಿಲುಬೆಯ ಮೇಲೆ ತನ್ನ ಮರಣದ ಮುಖಾಂತರವಾಗಿ ಸಂಪೂರ್ಣ ರಕ್ಷಣೆಯ ಕೊಡುಗೆಯನ್ನು ನಮಗೆ ತಂದಿದ್ದಾನೆ.

ಯೇಸುವು ನಮಗೆ ಒಬ್ಬನೇ ಒಬ್ಬ ರಕ್ಷಕನಾಗಿದ್ದಾನೆ ಎಂದು ಬೈಬಲ್ ಸ್ಪಷ್ಟಪಡಿಸುತ್ತದೆ. "ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ" (ಅಪೊಸ್ತಲರ ಕೃತ್ಯಗಳು 4:12) ಎಂದು ಪೇತ್ರನು ಹೇಳಿದ್ದಾನೆ. ದೇವರ ಮುಂದೆ ಸ್ವೀಕಾರ ಯೋಗ್ಯವಾಗುವ ರೀತಿಯಲ್ಲಿ ನೀವು ನಿಲ್ಲುವಂತೆ ನಿಮ್ಮ ಪಾಪಗಳಿಂದ ನೀವು ರಕ್ಷಿಸಲ್ಪಡಲು ಬಯಸಿದರೆ, ನೀವು ಕ್ರಿಸ್ತನ ಬಳಿಗೆ ಬರತಕ್ಕದ್ದು (ಯೋಹಾನ 14:6; ಮಾರ್ಕ 16:16). ಬೈಬಲ್ ಅನುಗುಣವಾಗಿ, ಆತನು ನಮ್ಮ ರಕ್ಷಕನು.

## ಕ್ರಿಸ್ತನಂತೆ

ಎರಡನೆಯದಾಗಿ, ಯೇಸು "ಕ್ರಿಸ್ತ" ಎಂದು ಕರೆಯಲ್ಪಟ್ಟಿದ್ದಾನೆ. ಅದರ ಅರ್ಥ, "ಅಭಿಷಿಕ್ತನು" ಗ್ರೀಕ ಭಾಷೆಯಲ್ಲಿ "ಕ್ರಿಸ್ತ" ಎಂಬುದು ಹಿಬ್ರಿಯ ಭಾಷೆಯಲ್ಲಿ "ಮೆಸ್ಸೀಯ" ಎಂದಾಗಿದೆ. ಹೊಸ ಒಡಂಬಡಿಕೆಯು ಯೇಸುವನ್ನು ವಾಗ್ದಾನ

ವಾದಾತನು, ದೇವರಿಂದ ಆಯ್ದುಕೊಂಡಾತನು ಎಂದು ಗುರುತಿಸುತ್ತದೆ.

ದೇವರ ವಿಶೇಷ ಸೇವಕನು ಬರಲಿದ್ದಾನೆಂದು ಪ್ರವಾದಿಗಳು ಮುಂತಿಳಿಸಿದರು:

> ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ, ವರದ ಮಗನು ನಮಗೆ ದೊರೆತನು; ಆಡಳಿತವು ಅವನ ಬಾಹುವಿನ ಮೇಲಿರುವದು; ಅದ್ಭುತ ಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯವಾದ ತಂದೆ, ಸಮಾಧಾನದ ಪ್ರಭು ಎಂಬುವು ಅವನ ಹೆಸರು. ಅವನ ಮುಖಾಂತರ ದಾವೀದನ ಸಿಂಹಾಸನದ ಆಡಳಿತವು ಅಭಿವೃದ್ಧಿಯಾಗುವದು. ದಾವೀದನ ರಾಜ್ಯದಲ್ಲಿ ನಿತ್ಯ ಸಮಾಧಾನವಿರುವುದು, ಆ ರಾಜ್ಯವು ಇಂದಿನಿಂದ ಯಾವಾಗಲೂ ನೀತಿ ನ್ಯಾಯಗಳ ಮೂಲಕ ಸ್ಥಾಪಿತವಾಗಿ ಸ್ಥಿರಗೊಳ್ಳುವದು. ಸೇನಾಧಿಪತಿಯಾದ ಯೆಹೋವನ ಆಗ್ರಹವು ಇದನ್ನು ನೆರವೇರಿಸುವುದು (ಯೆಶಾಯ 9:6, 7).

"ಎಫ್ರಾತದ ಬೇತ್ಲೆಹೇಮೇ, ನೀನು ಯೆಹೂದದ ಗ್ರಾಮಗಳಲ್ಲಿ ಚಿಕ್ಕದ್ದಾಗಿದ್ದರೂ ಇಸ್ರಾಯೇಲನ್ನು ಆಳತಕ್ಕವನು ನಿನ್ನೊಳಗಿಂದ ನನಗಾಗಿ ಹೊರಡುವನು; ಆತನ ಹೊರಡೋಣದ ಮೂಲವು ಪುರಾತನವೂ ಅನಾದಿಯೂ ಆದದ್ದು" (ಮೀಕ 5:2) ಎಂದು ಮೀಕನು ಪ್ರವಾದಿಸಿದನು. ಪ್ರವಾದಿಯು ಮುಂತಿಳಿಸಿದಾತನು ಯೇಸುವೇ ಎಂದು ಹೊಸ ಒಡಂಬಡಿಕೆಯು ಸಿದ್ಧಪಡಿಸಿ ತೋರಿಸುತ್ತದೆ.

ತನ್ನ ಇಹಲೋಕದ ಸೇವೆಯ ಅಂತ್ಯದಲ್ಲಿ ಯೇಸುವು ತನ್ನ ಶಿಷ್ಯರೊಂದಿಗೆ ಫಿಲಿಪ್ಪನ ಕೈಸರಿಯಕ್ಕೆ ನಡೆದು ಹೋಗುತ್ತಿದ್ದನು. ಅವರು ನಡೆಯುತ್ತಿದ್ದಂತೆ ಯೇಸು ತನ್ನ ಶಿಷ್ಯರಿಗೆ, "ಜನರು ಮನುಷ್ಯ ಕುಮಾರನಾದ ನನ್ನನ್ನು ಯಾರು ಅನ್ನುತ್ತಾರೆ?" ಎಂದು ಪ್ರಶ್ನಿಸಿದನು. ಅದಕ್ಕೆ ಶಿಷ್ಯರು, "ನಿನ್ನನ್ನು ಕೆಲವರು ಸ್ನಾನಿಕನಾದ ಯೋಹಾನನು ಅನ್ನುತ್ತಾರೆ, ಕೆಲವರು ಎಲೀಯನು ಅನ್ನುತ್ತಾರೆ, ಬೇರೆ ಕೆಲವರು ಯೆರೆಮೀಯನು, ಇಲ್ಲವೇ ಪ್ರವಾದಿಗಳಲ್ಲಿ ಒಬ್ಬನು ಅನ್ನುತ್ತಾರೆ" ಎಂದು ಹೇಳಿದನು (ಮತ್ತಾಯ 16:13, 14). ಅವರ ಉತ್ತರದ ನಂತರ ಯೇಸುವು, "ಆದರೆ ನೀವು ನನ್ನನ್ನು ಯಾರನ್ನುತ್ತೀರಿ?" ಎಂದು ಕೇಳಿದನು. ಪೇತ್ರನು ಆತನಿಗೆ ಉತ್ತರ ಕೊಟ್ಟನು. "ನೀನು ಬರಬೇಕಾಗಿರುವ ಕ್ರಿಸ್ತನು, ಸಜೀವನಾದ ದೇವರ ಕುಮಾರನು" (ಮತ್ತಾಯ 16:15, 16) ಎಂದು ಹೇಳಿದನು. ಪೇತ್ರನ ಉತ್ತರವನ್ನು ಯೇಸು ಮೆಚ್ಚಿಕೊಂಡನು. ಮತ್ತು "ಯೋನನ ಮಗನಾದ ಸೀಮೋನನೇ, ನೀನು ಧನ್ಯನು; ಈ ಗುಟ್ಟು ನಿನಗೆ ತಿಳಿಸಿದವನು ನರಮನುಷ್ಯನಲ್ಲ, ಪರಲೋಕದಲ್ಲಿರುವ ನನ್ನ ತಂದೆಯೇ ತಿಳಿಸಿದನು" (ಮತ್ತಾಯ 16:17) ಎಂದು ಯೇಸು ಹೇಳಿದನು. "ಪೇತ್ರನೇ, ನೀನು ಮನುಷ್ಯರು ಹೇಳಿದ್ದರ ಮೇಲೆ ಅವಲಂಭಿಸಿ ನೀನು

ಈ ತೀರ್ಮಾನಕ್ಕೆ ಬರಲಿಲ್ಲ. ಪರಲೋಕದಲ್ಲಿಯ ದೇವರಿಂದ ಈ ಉತ್ತರವನ್ನು ಸ್ವೀಕರಿಸಿದ್ದೀ" ಎಂದು ಯೇಸು ಹೇಳಿದನೆಂದು ಬೇರೆ ಮಾತುಗಳಲ್ಲಿ ಹೇಳಬಹುದು. ಇದು ದೈವಿಕ ಪ್ರಕಟಣೆಯಾಗಿತ್ತು, ಆದರೆ ಮಾನವರ ಅನುಮಾನವಾಗಿರಲಿಲ್ಲ.

ಹೊಸ ಒಡಂಬಡಿಕೆಯು ಯೇಸುವನ್ನು ಸಂಬಂಧಿಸಿ ಹೇಗೆ ಹೇಳುತ್ತದೆಂಬುದನ್ನು ಆಲೋಚಿಸಿರಿ. ಅದು ಆತನನ್ನು "ಕ್ರಿಸ್ತ" ಎಂದು ಕರೆಯುವಂತೆ, ಅದು ಆತನನ್ನು ಒಬ್ಬಾತನು, ದೇವರಿಂದ ವಿಶೇಷವಾಗಿ ಆಯ್ಕೆಮಾಡಲ್ಪಟ್ಟಾತನು ಎಂದು ಗುರುತಿಸುತ್ತದೆ. ಆತನು ಒಬ್ಬಾತನ ಮುಂದೂತನಲ್ಲ, ಆತನೇ ಒಬ್ಬಾತನಾಗಿದ್ದಾನೆ. ಆಯ್ಕೆಯಾದಾತನ ಬರೋಣದ ಬಗ್ಗೆ ಆತನು ಮುಂತಿಳಿಸಲಿಲ್ಲ, ಆಯ್ಕೆಯಾದಾತನನ್ನು ಕುರಿತ ಎಲ್ಲಾ ಪ್ರವಾದನೆಗಳನ್ನು ನೆರವೇರಿಸಿದಾತನು ಆತನಾಗಿದ್ದಾನೆ, ಆಯ್ಕೆಯಾದಾತನೊಂದಿಗೆ ಕೇವಲ ಸಂಬಂಧಿಸಿದವನು ಆತನಾಗಿರಲಿಲ್ಲ. ಆದರೆ ಆತನು ಆಯ್ಕೆಯಾದಾತನೇ ಆಗಿದ್ದನು.

## ದೇವರ ಕುಮಾರನಂತೆ

ಮೂರನೆಯದು, ಯೇಸುವು ಹೊಸ ಒಡಂಬಡಿಕೆಯಲ್ಲಿ ದೇವರ ಕುಮಾರನಂತೆ, ದೈವತ್ವದ ಎರಡನೆಯ ಸದಸ್ಯನಂತೆ ಗುರುತಿಸಲ್ಪಟ್ಟಿದ್ದಾನೆ.

ಯೇಸುವಿನ ಭೂಲೋಕದ ಸೇವೆಗಾಗಿ ಮಾರ್ಗ ಸಿದ್ಧಮಾಡಲು ಸ್ನಾನಿಕನಾದ ಯೋಹಾನನು ದೇವರಿಂದ ಆಯ್ಕೆ ಮಾಡಲ್ಪಟ್ಟನು. ಅವನು ಮಾನಸಾಂತರವನ್ನು ಪ್ರಸಂಗಿಸುವದರಿಂದಲೂ ಪಾಪಗಳ ಕ್ಷಮಾಪಣೆಗಾಗಿ ಮಾನಸಾಂತರದ ಬಾಪ್ತಿಸ್ಮವನ್ನು ಕೊಡುವದರಿಂದಲೂ ಈ ಕಾರ್ಯವನ್ನು ಮಾಡಿದನು (ಮಾರ್ಕ 1:4). ತನ್ನ ಪ್ರಸಂಗಕ್ಕೆ ಪ್ರತಿಕ್ರಿಯೆ ತೋರಿಸಿದವರಿಗೆ ಬರಲಿಕ್ಕಿದ್ದ ಮೆಸ್ಸೀಯನ ಕಡೆಗೆ ತೋರಿಸಿದನು. ತಮ್ಮ ಮಾನಸಾಂತರ ಮತ್ತು ಬಾಪ್ತಿಸ್ಮದಲ್ಲಿ ಜನರು ಮೆಸ್ಸೀಯನು ಬಂದಾಗ ಆತನನ್ನು ಸ್ವೀಕರಿಸುವ ಪ್ರತಿಜ್ಞೆ ಮಾಡುತ್ತಿದ್ದರು (ಅಪೊಸ್ತಲರ ಕೃತ್ಯಗಳು 19:4). ಯೋಹಾನನು, ದೇವರು ತನಗೆ ಕೊಟ್ಟ ಸೇವೆಯನ್ನು ನೆರವೇರಿ ಸುತ್ತಿದ್ದಂತೆ ಎಲ್ಲಾ ಯೂದಾಯದಿಂದಲೂ ಯೊರ್ದನಿನ ಸುತ್ತಲಿನ ಎಲ್ಲಾ ಸ್ಥಳಗಳಿಂದಲೂ ಜನರು ಆತನ ಬಳಿಗೆ ಬಂದು ಅವನಿಂದ ಬಾಪ್ತಿಸ್ಮ ಹೊಂದಿದರು (ಮತ್ತಾಯ 3:5). ಒಂದು ದಿನ ಯೋಹಾನನು ಹೊಳೆಯಲ್ಲಿ ಜನರಿಗೆ ಬಾಪ್ತಿಸ್ಮ ಕೊಡುತಿದ್ದಾಗ, ಯೇಸು ಯೋರ್ದನ್ ತೀರಗಳಲ್ಲಿ ಕಾಣಿಸಿಕೊಂಡನು, ಆ ಸಮಯದಲ್ಲಿ ಯೇಸು ಮೆಸ್ಸೀಯನಾಗಿದ್ದಾನೆಂಬುದನ್ನು ಯೋಹಾನನು ಸ್ಪಷ್ಟವಾಗಿ ತಿಳಿದಿರಲಿಲ್ಲ (ಯೋಹಾನ 1:29-31). ಆದರೆ ಯೇಸುವು ತನಗಿಂತ ಉತ್ತಮವಾದ ಮನುಷ್ಯನೆಂದು ತಿಳಿದಿದ್ದನು. ಹೀಗಿದ್ದಾಗ, "ನಾನು ನಿನ್ನಿಂದ

ಬಾಪ್ತಿಸ್ಮ ಮಾಡಿಸಿ ಕೊಳ್ಳುವವನಾಗಿರುವಲ್ಲಿ ನೀನು ನನ್ನ ಬಳಿಗೆ ಬರುವದೇನು?" ಎಂದು ಹೇಳಿದನು. ಅದಕ್ಕೆ ಯೇಸು, "ಸಧ್ಯಕ್ಕೆ ಒಪ್ಪಿಕೋ. ಹೀಗೆ ನಾವು ಎಲ್ಲಾ ಧರ್ಮವನ್ನು ನೆರವೇರಿಸತಕ್ಕದ್ದಾಗಿದೆ" (ಮತ್ತಾಯ 3:15) ಎಂದು ಹೇಳಿದನು. ಯೋಹಾನನು ದೇವರ ಕಾರ್ಯ ಮಾಡುತ್ತಿದ್ದನು. ಅವನು ದೇವರಿಂದ ಕಳುಹಿಸಲ್ಪಟ್ಟ ಮನುಷ್ಯನಾಗಿದ್ದನು. ಭೂಲೋಕದಲ್ಲಿದ್ದಾಗ ಯೇಸುವು ದೇವರ ಚಿತ್ತಕ್ಕೆ ಸಂಪೂರ್ಣವಾಗಿ ಸಮರ್ಪಿತನಾಗಿರಲು ಬಯಸಿದನು. ಹೀಗೆ ಆತನು ವಿಧೇಯತೆಯಿಂದ ಯೋಹಾನನಿಂದ ಬಾಪ್ತಿಸ್ಮ ಹೊಂದಿದನು - ಕ್ಷಮಿಸಲ್ಪಡ ಬೇಕಾದ ಅವಶ್ಯಕತೆಯುಳ್ಳ ಪಾಪಗಳು ಆತನಲ್ಲಿ ಇದ್ದವು ಎಂಬುದಾಗಿ ಅಲ್ಲ, ಆತನಿಗೆ ಮಾನಸಾಂತರದ ಅವಶ್ಯಕತೆಯಿತ್ತೆಂಬುದಕ್ಕಾಗಿಯೂ ಅಲ್ಲ, ಮೆಸ್ಸೀಯನು ಬಂದಾಗ ಆತನನ್ನು ಸ್ವೀಕರಿಸುವ ಅಗತ್ಯತೆ ಆತನಿಗಿತ್ತು ಎಂಬುದಕ್ಕಾಗಿಯೂ ಅಲ್ಲ. ಆತನೇ ಮೆಸ್ಸೀಯನಾಗಿದ್ದನು. ಆದರೆ ದೇವರ ಚಿತ್ತವನ್ನು ನೆರವೇರಿ ಸಲು, ಎಲ್ಲಾ ನೀತಿ ಯನ್ನು ನೆರವೇರಿಸಲು ಆತನು ಯೋಹಾನನ ಬಾಪ್ತಿಸ್ಮಕ್ಕೆ ಒಪ್ಪಿಸಿಕೊಂಡನು.

ಯೋಹಾನನು ಯೇಸುವನ್ನು ಮುಳುಗೇಳಿಸಿದನಂತರ ನೀರಿನಿಂದ ಹೊರಗೆ ಬಂದಾಗ, ದೇವರ ಆತ್ಮನು ಪರಲೋಕದಿಂದ ಆತನ ಮೇಲೆ ಇಳಿದು ಬಂದನು. ಈ ಅದ್ಭುತಕರವಾದ ಸಂಗತಿಯನ್ನು ಯೋಹಾನನು ನೋಡಿದಾಗ, ಯೇಸುವು ಮೆಸ್ಸೀಯನಾಗಿದ್ದಾನೆಂದು ಅವನು ತಿಳಿದುಕೊಂಡನು (ಯೋಹಾನ 1:32-34). ಆಗ ಪರಲೋಕದಿಂದ ಒಂದು ಧ್ವನಿಯು, "ನನ್ನ ಪ್ರಿಯ ಕುಮಾರನು, ಈತನನ್ನು ನಾನು ಮೆಚ್ಚಿದ್ದೇನೆ" ಎಂದು ಹೇಳಿತು (ಮತ್ತಾಯ 3:17). ಹೊಸ ಒಡಂಬಡಿಕೆಯ ಈ ವಚನಗಳಲ್ಲಿ ಒಂದುಗೂಡಿಸಿದ್ದು ಯೇಸುವು ತನ್ನ ಕುಮಾರನೆಂದು ದೇವರ ಸಾಕ್ಷಿಯಾಗಿದೆ.

ಅಪೊಸ್ತಲ ಯೋಹಾನನು ಯೇಸುವು ದೇವರ ಕುಮಾರನಾಗಿದ್ದಾನೆಂದು ಮೂರು ಸಾಕ್ಷಿಗಳು ನಮಗೆ ಕೊಡಲ್ಪಟ್ಟಿವೆಯೆಂದು ಹೇಳಿದನು. "ಆತ್ಮ, ನೀರು, ರಕ್ತ ಎಂಬ ಮೂರು ಸಾಕ್ಷಿಗಳುಂಟು: ಈ ಮೂರು ಒಂದೇ ಅಭಿಪ್ರಾಯವಾಗಿ ಸಾಕ್ಷಿ ಹೇಳುತ್ತವೆ" (1 ಯೋಹಾನ 5:7, 8) ಎಂದು ಅವನು ಹೇಳಿದನು. ಯೇಸುವಿನ ಬಾಪ್ತಿಸ್ಮದ ನಂತರ ಪರಿಶುದ್ಧಾತ್ಮನು ಆತನ ಮೇಲೆ ಇಳಿದು ಬಂದು ಯೇಸುವು ದೇವರ ಕುಮಾರನಾಗಿರುವನೆಂಬುದಕ್ಕೆ ಸಾಕ್ಷಿ ಕೊಟ್ಟನು. ಪರಿಶುದ್ಧಾತ್ಮನು ಸುವಾರ್ತೆಗಳಲ್ಲಿ, ಬೇರೆ ಸಮಯಗಳಲ್ಲಿಯೂ ಸಹ ಈ ಸಾಕ್ಷಿಯನ್ನು ಕೊಟ್ಟನು. ಯೇಸುವು ತನ್ನ ಕುಮಾರನಾಗಿದ್ದನು ಎಂದು ತಂದೆಯು ಪರಲೋಕದಿಂದ ಹೇಳುವಾಗ "ನೀರು" ಯೇಸುವಿನ ಬಾಪ್ತಿಸ್ಮಕ್ಕೆ ಸಂಬಂಧಿಸಿದೆ. ಯೋಹಾನನು ಸೂಚಿಸಿದ "ರಕ್ತ"ವು ಯೇಸುವಿನ ಮರಣವನ್ನು ಪ್ರತಿನಿಧೀಕರಿಸುತ್ತದೆ. ಶಿಲುಬೆಯ ಸುತ್ತಲೂ ಇದ್ದ ಅದ್ಭುತಕರವಾದ ಘಟನೆಗಳು ಯೇಸುವಿನ ದೈವತ್ವಕ್ಕೆ ಸಾಕ್ಷಿ

ಕೊಡುತ್ತವೆ. "ನಾವು ಮನುಷ್ಯರ ಸಾಕ್ಷಿಯನ್ನು ತೆಗೆದು ಕೊಳ್ಳುತ್ತೇವಲ್ಲಾ; ದೇವರ ಸಾಕ್ಷಿಯು ಅದಕ್ಕಿಂತ ವಿಶೇಷವಾಗಿದೆ. ದೇವರು ಕೊಟ್ಟ ಸಾಕ್ಷಿ ಏನಂದರೆ ಆತನು ತನ್ನ ಮಗನ ವಿಷಯದಲ್ಲಿ ಹೇಳಿದ್ದೇ" (1 ಯೋಹಾನ 5:9) ಎಂದು ಯೋಹಾನನು ಹೇಳಿದನು. ಮೂವರು ಪ್ರಾಮಾಣಿಕ ಜನರು ಒಂದಾಗಿ ಒಂದು ಸತ್ಯದ ಬಗ್ಗೆ ಸಾಕ್ಷಿಕೊಟ್ಟರೆ ನಾವು ಅವರ ಸಾಕ್ಷಿಯನ್ನು ಸ್ವೀಕರಿಸುತ್ತೇವೆ. ದೇಶದ ಯಾವುದೇ ಕಾನೂನು ನ್ಯಾಯಾಲಯವೂ ಸ್ವೀಕರಿಸುತ್ತದೆ. ದೇವರ ಸಾಕ್ಷಿಗಿಂತ ಹೆಚ್ಚಿನ ಯಾವುದನ್ನು ನಿರೀಕ್ಷಿಸೋಣ! ಆತನು ತನ್ನ ಮಗನನ್ನು ಕುರಿತು ಸಾಕ್ಷಿಕೊಟ್ಟಿದ್ದಾನೆ - ಅದು ಆತ್ಮನ ಸಾಕ್ಷಿಯಾಗಿದೆ (ಯೇಸುವಿನ ಬಾಪ್ತಿಸ್ಮದ ಸಮಯದಲ್ಲಿ ಪಾರಿವಾಳದ ರೂಪದಲ್ಲಿ). ಅದು ನೀರಿನ ಸಾಕ್ಷಿಯಾಗಿದೆ (ಯೇಸುವಿನ ಬಾಪ್ತಿಸ್ಮದಲ್ಲಿ ತಂದೆಯ ಧ್ವನಿಯು ಕೇಳಿಸಲ್ಪಟ್ಟಾಗ) ಹಾಗೂ ಅದು ರಕ್ತದ ಸಾಕ್ಷಿಯಾಗಿದೆ (ಯೇಸುವಿನ ಮರಣದ ಸಮಯದಲ್ಲಿ ಅದ್ಭುತಗಳು ಸಂಭವಿಸಿದಾಗ).

ಯೇಸುವು ಯಾರು? ಉತ್ತರದ ಬಗ್ಗೆ ಪರಿಶುದ್ಧ ಬರಹಗಳು ಯಾವ ಸಂಶಯವನ್ನೂ ಉಳಿಸಿರುವದಿಲ್ಲ. ಹೊಸ ಒಡಂಬಡಿಕೆಯು ಯೇಸುವು ದೇವರ ಕುಮಾರನಾಗಿದ್ದಾನೆ. ಯೇಸುವನ್ನು ಅಲಕ್ಷಿಸಬಾರದು ಎಂದು ಸ್ಪಷ್ಟವಾಗಿ ಬೋಧಿಸುತ್ತದೆ.

## ಕರ್ತನಂತೆ

ನಾಲ್ಕನೆಯದು, ಹೊಸ ಒಡಂಬಡಿಕೆಯು ಯೇಸುವನ್ನು "ಕರ್ತನು" ಎಂದು ಕರೆಯುತ್ತದೆ. ಆತನು ನಮ್ಮ ಪರಮ ಶ್ರೇಷ್ಠ ಅಧಿಪತಿಯು, ಆತನಿಗೆ ದೇವರಿಂದ ಎಲ್ಲಾ ಅಧಿಕಾರಗಳು ಕೊಡಲ್ಪಟ್ಟಿವೆ.

ಯೇಸುವು ಸತ್ತವರೊಳಗಿಂದ ಪುನರುತ್ಥಾನ ಹೊಂದಿದನಂತರ, ಆತನು ತನ್ನ ಶಿಷ್ಯರಿಗೆ ಕಾಣಿಸಿಕೊಂಡನು. ತಾನು ನಿಜವಾಗಿಯೂ ಸತ್ತವರೊಳಗಿಂದ ಎದ್ದು ಬಂದಿದ್ದೇನೆಂದು ಪ್ರದರ್ಶಿಸಿದನು. ಯೇಸುವು ತನ್ನ ಶಿಷ್ಯರಿಗೆ ಹೀಗೆ ಹೇಳಿದನು,

> ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟು ಹೋಗಿ, ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ, ಅವರಿಗೆ ತಂದೆಯ, ಕುಮಾರನ, ಪರಿಶುದ್ಧಾತ್ಮನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕೈಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಸದಾಕಾಲ ನಿಮ್ಮ ಸಂಗಡ ಇರುತ್ತೇನೆ (ಮತ್ತಾಯ 28:18-20).

ಯೇಸು ತಂದೆಯ ಬಳಿಗೆ ಏರಿಹೋದನಂತರ ಹತ್ತು ದಿನಗಳ ಮೇಲೆ, ಪರಿಶುದ್ಧಾತ್ಮನು ಅಪೊಸ್ತಲರ ಮೇಲೆ ಸುರಿಸಲ್ಪಟ್ಟನು. ಆ ದಿನದಂದು ಅಂದರೆ ಪಂಚಾಶತ್ತಮ ದಿನದಂದು, ಅಲ್ಲಿ ಕೂಡಿ ಬಂದಿದ್ದ ದೊಡ್ಡ ಜನಸಮೂಹಕ್ಕೆ ಪೇತ್ರನು ಮಾತಾಡಿದನು. ಯೇಸುವು ಕ್ರಿಸ್ತನೆಂದು ರುಜುವಾತುಪಡಿಸುವ ಪುರಾವೆಯನ್ನು ಅವನು ಕೊಟ್ಟನು. ಅವನು ತನ್ನ ಪ್ರಸಂಗದ ಅಂತ್ಯಕ್ಕೆ ಬಂದಾಗ, ದೇವರು ಯೇಸುವನ್ನು "ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ" (ಅಪೊಸ್ತಲರ ಕೃತ್ಯಗಳು 2:36) ಮಾಡಿದ್ದಾನೆಂದು ತಿಳಿಯ ಬೇಕೆಂದು ಹೇಳಿದನು. ಯೇಸುವು ಮನುಷ್ಯನಾಗಲು ಮತ್ತು ಮರಣದ ಮಟ್ಟಿಗೆ ವಿಧೇಯನಾದದ್ದನ್ನು ವಿವರಿಸಿ ಪೌಲನು ಹೀಗೆ ಬರೆದಿದ್ದಾನೆ,

> ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದದರಿಂದ ಪರಲೋಕ, ಭೂಲೋಕ, ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು (ಫಿಲಿಪ್ಪಿ 2:9-11).

"ಆತನು [ದೇವರು] ಸಮಸ್ತವನ್ನೂ ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು, ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು ಅತನ ದೇಹವಾಗಿದೆ; ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ" (ಎಫೆಸ 1:22, 23) ಎಂದು ಯೇಸುವಿನ ಬಗ್ಗೆ ಪೌಲನು ಬರೆದನು.

ಹೊಸ ಒಡಂಬಡಿಕೆಯ ಪ್ರಕಾರವಾಗಿ ಯೇಸುವಿನ ಒಡೆತನದ ಅರ್ಥ ಏನಾಗುತ್ತದೆ? ವ್ಯವಹಾರಿಕ ಮಾತುಗಳಲ್ಲಿ ನಾವು ಆತನಿಗೆ ಒಪ್ಪಿಸಿಕೊಡುವಂಥದ್ದು ಎಂದು ಅರ್ಥವಾಗುತ್ತದೆ. "ನೀವು ನನ್ನನ್ನು 'ಕರ್ತನೇ, ಕರ್ತನೇ' ಅಂತ ಕರೆದು ನಾನು ಹೇಳುವದನ್ನು ನಡಿಸದೆ ಇರುವುದೇಕೆ?" (ಲೂಕ 6:46) ಎಂದು ಯೇಸು ಹೇಳಿದನು. "ನನ್ನನ್ನು ಕರ್ತನೇ, ಕರ್ತನೇ ಅನ್ನುವವರೆಲ್ಲರು ಪರಲೋಕ ರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕರಾಜ್ಯಕ್ಕೆ ಸೇರುವನು" (ಮತ್ತಾಯ 7:21) ಎಂದೂ ಹೇಳಿದನು. ಕ್ರಿಸ್ತನ ಬೋಧನೆಗೆ ನಿಮ್ಮನ್ನು ಒಪ್ಪಿಸಿಕೊಡಲು ನೀವು ಸಿದ್ಧರಿರುವಿರೋ? ಎರಡನೆಯದು, ನಮ್ಮ ಜೀವಿತಗಳಲ್ಲಿ ಕ್ರಿಸ್ತನಿಗೆ ಪ್ರಾಧಾನ್ಯತೆ ಕೊಡತಕ್ಕದ್ದೆಂದು ಅದರ ಅರ್ಥವಾಗುತ್ತದೆ. ನಾವು ಆತನಿಗೆ ನಮ್ಮ ನಿಷ್ಠೆಯನ್ನು ನಮ್ಮ ಪ್ರೀತಿಯನ್ನು ಕೊಡತಕ್ಕದ್ದು, ಪರಲೋಕದಿಂದ ಗೌರವಿಸಲ್ಪಟ್ಟ

ಕರ್ತನು ಆತನಾಗಿದ್ದಾನೆ. ನಮ್ಮ ಹೃದಯಗಳಲ್ಲಿ ಆತನೊಬ್ಬನೇ ಕರ್ತನಾಗಿ ಸಿಂಹಾಸನರೂಢನಾಗಿರತಕ್ಕದ್ದು.

"ಪ್ರತಿಯೊಂದು ಹೃದಯದಲ್ಲಿ ಒಂದು ಶಿಲುಬೆಯು ಹಾಗೂ ಒಂದು ಸಿಂಹಾಸನವು ಇರುವುದು. ನಾನು ಸಿಂಹಾಸನದ ಮೇಲೆ ನನ್ನನ್ನು ಇಟ್ಟುಕೊಂಡರೆ, ಕ್ರಿಸ್ತನನ್ನು ಶಿಲುಬೆಯ ಮೇಲೆ ಹಾಕುವೆನು. ನಾನು ಕ್ರಿಸ್ತನನ್ನು ಸಿಂಹಾಸನದ ಮೇಲೆ ಇಟ್ಟರೆ, ನನ್ನನ್ನು ನಾನು ಶಿಲುಬೆಯ ಮೇಲೆ ಹಾಕಿಕೊಳ್ಳತಕ್ಕದ್ದು" ಎಂದು ಒಬ್ಬನು ಹೇಳಿದ್ದಾನೆ. ಯಾರೊಬ್ಬನಿಗೂ ಇಬ್ಬರು ಯಜಮಾನರು ಇರಲಾರರು. ನೀವು ಕ್ರಿಸ್ತನ ಒಡೆತನಕ್ಕೆ "ಹೌದು" ಎಂದು ಹೇಳಿದರೆ, ನೀವು ನಿಮ್ಮ ಸ್ವಂತ ಇಚ್ಛೆ ಮತ್ತು ಬಯಕೆಗಳಿಗೆ 'ಇಲ್ಲ' ಎಂಬ ಉತ್ತರ ಕೊಡತಕ್ಕದ್ದು. ನೀವು ಒಬ್ಬನನ್ನು ಪ್ರೀತಿಸುವಿರಿ ಹಾಗೂ ಇನ್ನೊಬ್ಬನನ್ನು ದ್ವೇಷಿಸುವಿರಿ (ಮತ್ತಾಯ 6:24).

ಯೇಸುವು ಕರ್ತನೆಂದು ಹೊಸ ಒಡಂಬಡಿಕೆ ಹೇಳುತ್ತದೆ. ದೇವರು ಪ್ರತಿಯೊಂದನ್ನು ಆತನ ಪಾದಗಳ ಕೆಳಗೆ ಹಾಕಿದ್ದಾನೆ. ಆತನು ಅರಸರ ಅರಸನೂ ಕರ್ತರ ಕರ್ತನೂ ಆಗಿದ್ದಾನೆ.

## ಮುಕ್ತಾಯ

ಹಾಗಾದರೆ, ಯೇಸುವು ಯಾರು? ಜಗತ್ತಿನಲ್ಲಿ ಕೇವಲ ಸಂಪೂರ್ಣವಾಗಿ ಖಚಿತವಾಗಿರುವ ಪುಸ್ತಕವು ಆತನು ನಮ್ಮ ರಕ್ಷಕನು, ಕ್ರಿಸ್ತನು, ದೇವರಿಂದ ಆಯ್ಕೆಯಾದಾತನು, ದೇವರ ಕುಮಾರನು ಮತ್ತು ನಮ್ಮ ಕರ್ತನು ಆಗಿದ್ದಾನೆಂದು ಹೇಳುತ್ತದೆ. ಇದು ಆತನ ಬಗೆಗಿರುವ ಸತ್ಯವಾಗಿದೆ. ಆತನು ಯಾರಾಗಿರುವನೆಂಬುದನ್ನು ನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ನೀವು ಬೇರೆ ಇತರ ಸಂಶೋಧನೆಗಾಗಿ ಕಾಯಬೇಕಾಗಿರುವದಿಲ್ಲ. ಬೈಬಲು ಆತನ ಬಗ್ಗೆ ಪರಿಪೂರ್ಣ ಸತ್ಯವನ್ನು ಹೇಳುತ್ತದೆ.

ಯೇಸುವು ಈ ಲೋಕದೊಳಗೆ ಬಂದದ್ದು ಕ್ಯಾಲಂಡರು ಕ್ರಿ.ಪೂ. ಮತ್ತು ಕ್ರಿ.ಶ. ಎಂದು ವಿಭಾಗಿಸಿದೆ. ಮಾನವ ಜನಾಂಗವನ್ನು, ರಕ್ಷಿಸಲ್ಪಟ್ಟವರನ್ನು ತಪ್ಪಿ ಹೋದವರಿಂದ ವಿಂಗಡಿಸುವದೆಂದು ಮತ್ತಾಯ 25:31-46 ಹೇಳುತ್ತದೆ. ಯೇಸು ತನ್ನ ಮುಂದೆ ನ್ಯಾಯತೀರ್ವಿಕೆಗಾಗಿ ನಿಂತಿರುವನೆಂದು ಪಿಲಾತನು ಯೋಚಿಸಿದನು. ಆದರೆ ಸತ್ಯದಲ್ಲಿ ಪಿಲಾತನು ಯೇಸುವಿನ ಮುಂದೆ ನಿಂತು ಕೊಂಡಿದ್ದನು. ಲೋಕದ ಅಂತಿಮ ದಿನದಂದು, ಯೇಸುವಿನ ಸಿಂಹಾಸನದ ಬಲಗಡೆಯಲ್ಲಿ ರಕ್ಷಿಸಲ್ಪಟ್ಟವರು ನಿಂತು ಕೊಳ್ಳುವರು. ತಪ್ಪಿ ಹೋದವರು ಆತನ ಸಿಂಹಾಸನದ ಎಡಗಡೆಯಲ್ಲಿ ನಿಂತುಕೊಳ್ಳುವರು. ನಿಮ್ಮ ಪ್ರತಿಕ್ರಿಯೆಯು ನೀವು ಆತನ ಬಲಗಡೆಯಲ್ಲಿ ನಿಲ್ಲುವಿರೋ, ಎಡಗಡೆಯಲ್ಲಿ ನಿಲ್ಲುವಿರೋ ಎಂಬುದು

ಭಿನ್ನತೆ ಮಾಡುವುದು. ಆತನ ರಕ್ಷಣೆಯ ಮುಖಾಂತರ ನೀವು ಆತನ ಬಲಗಡೆಯಲ್ಲಿ ನಿಲ್ಲಬಹುದು. "ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ: ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ" (ಯೋಹಾನ 14:6) ಎಂದು ಆತನು ಹೇಳಿದ್ದಾನೆ. ನೀವು ಯೇಸುವಿನ ಮುಖಾಂತರ ದೇವರ ಬಳಿಗೆ ಬರುವಿರಿ ಇಲ್ಲವೇ ನಿತ್ಯದಂಡನೆಯನ್ನು ಅನುಭವಿಸುವಿರಿ. ನಿಮಗೆ ಜೀವವಿರಬೇಕೆಂದು ಆತನು ಬಂದನು (ಯೋಹಾನ 10:10). ಆತನಿಲ್ಲದಿದ್ದರೆ ನಾವು ನಿತ್ಯ ಮರಣದಲ್ಲಿ ನೆಲೆಗೊಂಡಿರುವೆವು.

ರಕ್ಷಣೆಗಾಗಿ ತನ್ನ ಬಳಿಗೆ ಬರಬೇಕೆಂದು ಯೇಸು ನಮ್ಮನ್ನು ಆಹ್ವಾನಿಸುತ್ತಾನೆ. ಇತರ ಧಾರ್ಮಿಕ ನಾಯಕರು ತಮ್ಮ ಪದ್ಧತಿಗಳಿಗೆ ಇಲ್ಲವೇ ತಮ್ಮ ಬೋಧನೆಗಳಿಗೆ ಬರಬೇಕೆಂದು ಕರೆಯುತ್ತಾರೆ. ಯೇಸುವು, ದೇವರ ಕುಮಾರನು ಮಾತ್ರವೇ. ತನ್ನ ಬಳಿಗೆ ಬರಲು ನಮ್ಮನ್ನು ಆಮಂತ್ರಿಸುತ್ತಾನೆ: "ಎಲ್ಲೈ, ಕಷ್ಟಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿ ಕೊಡುವೆನು" (ಮತ್ತಾಯ 11:28) ಎಂದು ಹೇಳಿದ್ದಾನೆ.

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. "ರಕ್ಷಕ" ಎಂಬ ಪದವು ಯಾವುದನ್ನು ಕುರಿತು ಹೇಳುತ್ತದೆ?
2. ಯೇಸುವು ಹೇಗೆ ಅದ್ವಿತೀಯ ರಕ್ಷಕನಾಗಿರುವನು?
3. "ಕ್ರಿಸ್ತ" ಎಂಬುದರ ಅರ್ಥವೇನು?
4. ಯೇಸುವು ದೇವರ ಕುಮಾರನಾಗಿದ್ದಾನೆಂದು ನಾವು ಹೇಗೆ ತಿಳಿದು ಕೊಳ್ಳುವೆವು?
5. 1 ಯೋಹಾನ 5:7, 8ರಲ್ಲಿ ಆತ್ಮ, ನೀರು ಮತ್ತು ರಕ್ತ ಯಾವುದನ್ನು ಕುರಿತು ಹೇಳುತ್ತದೆ?
6. ಅಪೊಸ್ತಲರ ಕೃತ್ಯಗಳು 2ರಲ್ಲಿ ಪೇತ್ರನು ತನ್ನ ಕೇಳುಗರು ಏನನ್ನು ತಿಳಿದುಕೊಳ್ಳ ಬೇಕೆಂದು ಕೇಳಿದನು?
7. ವ್ಯವಹಾರಿಕ ಮಾತುಗಳಲ್ಲಿ ಯೇಸುವಿನ ಒಡೆತನದ ಅರ್ಥ ನಮಗೇನಾಗುತ್ತದೆ?

## ಪದ ಸಹಾಯಗಳು

ದಾವೀದ ನಗರ - ಬೇತ್ಲೆಹೇಮ.

ಶಿಲುಬೆಯ ಮೇಲೆ ನೇತು ಹಾಕುವದರಿಂದ ಮರಣ - ಮರಣ ದಂಡನೆಯ ರೋಮನ್ನರ ವಿಧಾನ; ಯೇಸುವು ನಿರಪರಾಧಿಯಾಗಿದ್ದರೂ ನಮ್ಮ ಪಾಪಗಳ ನಿಮಿತ್ತವಾಗಿ ಶಿಲುಬೆಗೆ ಹಾಕಲ್ಪಟ್ಟನು.

ಅರಸರ ಅರಸನು ಹಾಗೂ ಕರ್ತರ ಕರ್ತನು - ಯೇಸುವಿನ ಹಾಗೂ ಆತನ ದೊಡ್ಡಸ್ತಿಕೆಗೆ ಸಂಬಂಧಿಸಿ ಹೇಳಿದ್ದು. ಆತನು ಇತರ ಎಲ್ಲರಿಗಿಂತಲೂ ಮೇಲಿನವನಾಗಿದ್ದಾನೆ.

ಪಂಚಾಶತ್ತಮ (ಪಂಚಾಶತ್ತಮ ದಿನ) - ಯೆಹೂದ್ಯರ ವಾರಗಳ ಹಬ್ಬ. ಸುಗ್ಗಿ ಹಬ್ಬವೆಂದೂ ಕರೆಯಲ್ಪಟ್ಟಿದೆ: ಸಭೆಯು ಪ್ರಾರಂಭವಾದ ದಿನ (ಅಪೊಸ್ತಲರ ಕೃತ್ಯಗಳು 2).

ಒಳಪಡುವಿಕೆ - ದೇವರಿಗೂ ಆತನ ವಾಕ್ಯಕ್ಕೂ ವಿಧೇಯತೆ.